# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.4519/2014

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ:30.7.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1) ಶ್ರೀಮತಿ ಸುಮಿತ್ರ.ಎಸ್. ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು, ಮತ್ತು (2) ಶ್ರೀ ರಾಜಶೇಖರ ಪುರಾಣಿಕ್, ಪರಿಸರ ಅಧಿಕಾರಿ, ಪ್ರಾದೇಶಿಕ ಪರಿಸರ ನಿಯಂತ್ರಣ ಮಂಡಳಿ, ಮಂಗಳೂರು,ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ ನಾಗರಾಜ, ನೆಲ್ಲಿಕಾರು ಗ್ರಾಮ, ಮಂಗಳೂರು ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಂಗಳೂರು, ಮತ್ತು (2) ಪರಿಸರ ಅಧಿಕಾರಿ, ಪ್ರಾದೇಶಿಕ ಪರಿಸರ ನಿಯಂತ್ರಣ ಮಂಡಳಿ, ಮಂಗಳೂರು, (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ಅವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರು ತಮ್ಮ ದೂರಿನಲ್ಲಿ ಮಂಗಳೂರು ತಾಲ್ಲೂಕು ನೆಲ್ಲಿಕಾರು ಗ್ರಾಮದ ಸ.ನಂ.215ರಲ್ಲಿ 0.30 ಎಕರೆ ಸ್ಥಳದಲ್ಲಿ ಮನೆ ಕಟ್ಟಿ ವಾಸವಿದ್ದು, ಪಕ್ಕದಲ್ಲಿ ಅವರ ಸಮುದಾಯದ ಶ್ರೀ ಶಾಂತಿ ಮರಿಯಮ್ಮ ದೇವಸ್ಥಾನವಿರುತ್ತದೆ. ಸದರಿ ದೇವಸ್ಥಾನ ಕಲ್ಲುಮಡಿ ಮಾಡುವ ಘಟಕದಿಂದ 160 ಮೀಟರ್ ಹಾಗೂ ಆತನ ಮನೆಯು 200

ಮೀಟರ್ ಅಂತರದಲ್ಲಿದೆ. ಕಲ್ಲುಪುಡಿ ಘಟಕದಲ್ಲಿ ಸ್ಫೋಟಕಗಳನ್ನು ಉಪಯೋಗಿಸುವುದರಿಂದ ಆತನ ಮನೆ ಬಿರುಕುಬಿಟ್ಟಿದ್ದು, ಕಂಪೌಂಡ್ ಗೋಡೆ ಕುಸಿದಿದೆ. ಇದರಿಂದ ದೂರುದಾರರಿಗೆ ತುಂಬಾ ತೊಂದರೆಯುಂಟಾಗಿದೆ. ಸದರಿ ಘಟಕದ ಮಾಲೀಕರು ಸಾರ್ವಜನಿಕ ರಸ್ತೆ ಬಂದುಮಾಡಿ ಕಬ್ಬಿಣದ ಗೇಟು ಅಳವಡಿಸಿರುತ್ತಾರೆ. ಈ ಬಗ್ಗೆ ಎಲ್ಲ ಇಲಾಖೆಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಆದ್ದರಿಂದ ನಿಯಮಬಾಹಿರವಾಗಿ ಕಲ್ಲುಗಣಿ ಗುತ್ತಿಗೆ ಮತ್ತು ಕಲ್ಲುಪುಡಿ ಘಟಕಕ್ಕೆ ನೀಡಿದ ಅನುಮತಿಯನ್ನು ರದ್ದುಗೊಳಿಸಬೇಕೆಂದು ಕೋರಿದ್ದಾರೆ.

3. ದೂರಿನ ಜೊತೆಗೆ ಸ.ನಂ.161/2, 5ರ ಕಚ್ಚಾ ನಕ್ಷೆಯನ್ನು ಹಾಗೂ ಜಿಲ್ಲಾಧಿಕಾರಿ, ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ, ನೆಲ್ಲಿಕಾರು ಗ್ರಾಮ ಪಂಚಾಯತಿ, ಮತ್ತು ಜೆಲ್ಲಿ ಕ್ರಷರ್ ಪ್ರಭಾರಿ ಪ್ರಾಧಿಕಾರ, ಮಂಗಳೂರು ಅವರಿಗೆ ಶ್ರೀನಿವಾಸ ಕಲ್ಲುಘಟಕಕ್ಕೆ ನೀಡಿದ ಅನುಮತಿ ರದ್ದುಪಡಿಸಲು ನೀಡಿದ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

4. ದೂರು ದಾಖಲಾದ ನಂತರ ಈ ಸಂಸ್ಥೆಯ ವಿಶೇಷ ತನಿಖಾ ತಂಡಕ್ಕೆ ತನಿಖೆ ಮಾಡಿ ವರದಿ ಸಲ್ಲಿಸಲು ಆದೇಶಿಸಿದಂತೆ, ವಿಶೇಷ ತನಿಖಾ ತಂಡದ ತನಿಖಾಧಿಕಾರಿಗಳು ದಿ.9.3.2016ರಂದು ವರದಿ ಸಲ್ಲಿಸಿದ್ದು ಕಂಡಿಕೆ 29ರಲ್ಲಿ ದೂರುದಾರರು ಆಪಾದಿಸಿದಂತೆ ಸ್ಥಳದಲ್ಲಿ ದೇವಸ್ಥಾನಕ್ಕೆ ಯಾವುದೇ ಹಾನಿಯುಂಟಾಗಿರುವುದಿಲ್ಲ. ಕಲ್ಲು ಘಟಕದ ಮಾಲೀಕರು ಯಾವುದೇ ರಸ್ತೆಯನ್ನು ಬಂದ್ ಮಾಡಿರುವುದಿಲ್ಲ ಮತ್ತು ದೂರುದಾರರ ಮನೆಗೆ ಸದರಿ ಘಟಕದಿಂದ ಯಾವುದೇ ಬಿರುಕು ಉಂಟಾಗಿರುವುದಿಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

5. ನಂತರ ಕಂಡಿಕೆ 35ರಲ್ಲಿ ಮಾನ್ಯ ಉಪಲೋಕಾಯುಕ್ತರು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕರು, ಮಂಗಳೂರು ಅವರಿಗೆ ತನಿಖೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ. ಅದರಂತೆ ದಿ.7.2.2017ರಂದು 1ನೇ ಎದುರುದಾರರಾದ

ಉಪನಿರ್ದೇಶಕರು ವರದಿ ಸಲ್ಲಿಸಿದ್ದು, ಗುತ್ತಿಗೆಗಳನ್ನು ನಿಯಮಾನುಸಾರ ಮಂಜೂರು ಮಾಡಲಾಗಿದೆ ಮತ್ತು ಅನಧಿಕೃತ ಕಲ್ಲುಗಣಿ ಗುತ್ತಿಗೆ ಪ್ರದೇಶ ಯಾವುದೂ ಇರುವುದಿಲ್ಲವೆಂದು ತಿಳಿಸಿ, ಮೆ.ಶ್ರೀನಿವಾಸ್ ಸ್ಟೋನ್ ಕ್ರಷರ್ ಅವರಿಗೆ ಸ.ನಂ.215/ಪಿ2ರಲ್ಲಿ 3 ಎಕರೆ ಪ್ರದೇಶವನ್ನು ಜೆಲ್ಲಿ ಕ್ರಷರ್ ಸ್ಥಾಪನೆಗಾಗಿ ಜಿಲ್ಲಾ ಕಲ್ಲುಪುಡಿ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಲ್ಲಿ ಮಂಡಿಸಿ ಅನುಮೋದನೆ ಮೇರೆಗೆ ಕ್ರಷರ್ ಲೈಸೆನ್ಸ್ ನೀಡಲಾಗಿದೆ. ಸದರಿ ಪ್ರದೇಶದಿಂದ ದೂರುದಾರ ನಾಗರಾಜ ಅವರ ಮನೆ 165 ಮೀ.ಅಂತರದಲ್ಲಿದೆ. ದಾಖಲೆಗಳನ್ನು ಪರಿಶೀಲಿಸಿದಾಗ, ಕಲ್ಲುಗಣಿ ಗುತ್ತಿಗೆಯನ್ನು ನೆಲ್ಲಿಕಾರು ಗ್ರಾಮದ ಸ.ನಂ.215ರಲ್ಲಿ ಒಟ್ಟು 7 ಜನರಿಗೆ ಲೈಸೆನ್ಸ್ ನೀಡಿದ್ದು ಕಂಡುಬರುತ್ತದೆ. ಸದರಿ ಪ್ರದೇಶದಿಂದ 200 ಮೀ ಅಂತರದಲ್ಲಿ ಯಾವುದೇ ಸಾರ್ವಜನಿಕ ರಚನೆ ಸರ್ಕಾರಿ ರಸ್ತೆ,ದೇವಾಲಯಗಳು,ವಾಸದ ಮನೆ ಕಂಡುಬರುವುದಿಲ್ಲವೆಂದೂ ದೂರುದಾರರ ಮನೆಯೂ ಸಹ ಸಾಕಷ್ಟು ಅಂತರದಲ್ಲಿದೆಯೆಂದೂ ತಿಳಿಸಿರುತ್ತಾರೆ

6. ಕರ್ನಾಟಕ ಕಲ್ಲುಪುಡಿ ಘಟಕಗಳ ಅಧಿನಿಯಮ 2013ರಂತೆ ಸುರಕ್ಷಿತ ವಲಯಕ್ಕಾಗಿ ಈ ಕೆಳಕಂಡ ಷರತ್ತುಗಳನ್ನು ಸಮಿತಿಗೆ ಮಂಡಿಸಲಾಗಿರುತ್ತದೆ.

(1) ಕಲ್ಲು ಪುಡಿ ಘಟಕಗಳು ರಾ.ಹೆ ಮತ್ತು ರಾಜ್ಯ ಹೆದ್ದಾರಿ 200 ಮೀ(ಕನಿಷ್ಟ ಅಂತರ)
(2)ಜಿಲ್ಲಾ ಪ್ರದಾನ ರಸ್ತೆ ಮತ್ತು ಇತರ ರಸ್ತೆ-100 ಮೀ. (ಕನಿಷ್ಟ ಅಂತರ)
(3)ಕಂದಾಯ ಗ್ರಾಮ ಶಾಲೆ, ದೇವಾಲಯ, 500 ಮೀ( ಕನಿಷ್ಟ ಅಂತರ)
(4)ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ಮುನ್ಸಿಪಲ್ ಸರಹದ್ದುಗಳ ಒಳಗೆ ಇರತಕ್ಕದ್ದಲ್ಲ.
(5)ಒಂಟಿ ಮನೆ ಮತ್ತು ಗುಂಪು ಮನೆಗಳಿಂದ ಕ್ರಷರ್ ಸ್ಥಾವರಕ್ಕೆ ಇರುವ ದೂರವನ್ನು ಲೈಸೆನ್ಸಿಂಗ್ ಪ್ರಾಧಿಕಾರವು ತೀರ್ಮಾನಿಸಬಹುದಾಗಿರುತ್ತದೆ.

7. ವಿಶೇಷ ತನಿಖಾ ತಂಡದವರು ಹಾಜರುಪಡಿಸಿದ ದಾಖಲೆಗಳಲ್ಲಿ ಭೂವಿಜ್ಞಾನಿ, ಲೋಕೇಶ್.ಎನ್. ಅವರು ದಿ.3.3.2015ರಂದು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಅವರಿಗೆ ಸಲ್ಲಿಸಿದ ವರದಿಯ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಸದರಿ ವರದಿಯಲ್ಲಿ ದಿ.27.2.2015ರಂದು ಭೂವಿಜ್ಞಾನಿ, ಉಪನಿರ್ದೇಶಕರ ಕಛೇರಿ, ಸಹಾಯಕ ಅಭಿಯಂತರರು, ಮತ್ತು ಕಂದಾಯ ಇಲಾಖೆಯ ಉಪತಹಶೀಲ್ದಾರ್ ಹಾಗೂ ಸರ್ವೆಯರ್ ಅವರೊಂದಿಗೆ ಜಂಟಿ ಸ್ಥಳ ತನಿಖೆ ಮಾಡಲಾಗಿ, ನೆಲ್ಲಿಕಾರು ಗ್ರಾಮದ ಸ.ನಂ.215ರಲ್ಲಿ ಕಲ್ಲು ಗಣಿ ಗುತ್ತಿಗೆ ಪ್ರದೇಶದಿಂದ 200 ಮೀಟರ್ ಒಳಗೆ ಒಂದು ದೇವಸ್ಥಾನ, 2 ವಾಸದ ಮನೆಗಳು ಇರುವುದು ಕಂಡುಬರುತ್ತದೆಂದು, ಆದರೆ ಸದರಿ ಮನೆಗಳಿಗೆ ಯಾವುದೇ ಹಾನಿ ಉಂಟಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

8. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ(ತಿದ್ದುಪಡಿ) ಅಧಿನಿಯಮದಂತೆ ಕಲಂ.6–ಎ(2)ರಲ್ಲಿ ಕಲ್ಲುಪುಡಿ ಘಟಕ ಅಥವಾ ಘಟಕಗಳ ಸಮೂಹವು ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳ ಜೊತೆಗೆ (ರಾಷ್ಟ್ರೀಯ ಹೆದ್ದಾರಿ/ರಾಜ್ಯ ಹೆದ್ದಾರಿ/ಪ್ರಧಾನ ಜಿಲ್ಲಾ ರಸ್ತೆ/ಗ್ರಾಮ ವಸತಿ ಪ್ರದೇಶ/ದೇವಾಲಯ/ ಶಾಲೆಗೆ ಸಮಾನಾಂತರವಾಗಿ) ಎಲ್ಲಾ 3 ಕಡೆಗಳಲ್ಲಿ 15–20 ಅಡಿ ಎತ್ತರದ ಗೋಡೆ/ಜಿಯಾ ಷೀಟ್ ರಕ್ಷಣೆ ಒದಗಿಸತಕ್ಕದ್ದೆಂದು ತಿಳಿಸಿರುತ್ತದೆ. ಆದರೆ ಉಪವಿಭಾಗಾಧಿಕಾರಿಗಳು ದಿ.15.4.2015ರಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ವರದಿಯಲ್ಲಿ ಕಲ್ಲು ಗಣಿ ಗುತ್ತಿಗೆ ಪ್ರದೇಶ/ಜೆಲ್ಲಿ ಕ್ರಷರ್ ಪ್ರದೇಶಗಳು ಮತ್ತೂ ದೂರುದಾರರ ಮನೆಗಳ ಮಧ್ಯದಲ್ಲಿ ಎತ್ತರವಾದ ದಟ್ಟ ಕಾಡುಮರಗಳು ಇರುತ್ತವೆಂದು ತಿಳಿಸಿರುತ್ತಾರೆ. ಸದರಿ ಘಟಕಗಳಿಂದ ಶಾಂತಿ ಮರಿಯಮ್ಮ ಗುಡಿಗೆ ಯಾವುದೇ ಹಾನಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

9. ಸದರಿ ವರದಿಯಿಂದ ಕಂಡುಬರುವುದೇನೆಂದರೆ ಕಲ್ಲು ಪುಡಿ ಘಟಕದ ಮಾಲೀಕರು 2013ರ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ(ತಿದ್ದುಪಡಿ) ಅಧಿನಿಯಮದ ನಿಯಮ 6–ಎರ ಅನುಸಾರ 3 ಕಡೆಗೆ 20 ಅಡಿ ಎತ್ತರದ ಯಾವುದೇ ಗೋಡೆಯನ್ನು ನಿರ್ಮಿಸಿಲ್ಲವೆಂದು ಸಾಬೀತಾಗುತ್ತದೆ. ಉಪನಿರ್ದೇಶಕರು ತಮ್ಮ ವರದಿಯ ಜೊತೆಗೆ ಕಲ್ಲುಪುಡಿ ಘಟಕಗಳ ಜಂಟಿ ಸ್ಥಳ ಪರಿಶೀಲನಾ ವರದಿ ಹಾಜರುಪಡಿಸಿದ್ದು ಮೆ.ಶ್ರೀನಿವಾಸ್ ಕ್ರಷರ್ ಘಟಕದಿಂದ 160 ಮೀ.ಅಂತರದಲ್ಲಿ ಒಂದು ಒಂಟಿ

ಮನೆಯಿದೆಯೆಂದು ತಿಳಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ವರದಿಯಂತೆ ಗೋಡೆ ನಿರ್ಮಿಸಿರುವುದಿಲ್ಲ. ಕಾರಣ ಶ್ರೀನಿವಾಸ್ ಕ್ರಷರ್ ಘಟಕವನ್ನು ಷರತ್ತು/ನಿಯಮಗಳನ್ನು ಉಲ್ಲಂಘಿಸಿ ಸ್ಥಾಪಿಸಿರುವುದು ಕಂಡುಬರುತ್ತದೆ. ಸದರಿ ಘಟಕಕ್ಕೆ ಲೈಸೆನ್ಸ್‌ನ್ನು ಜಿಲ್ಲಾಧಿಕಾರಿಗಳು 1ನೇ ಎದುರುದಾರರು ನೀಡಿದ ವರದಿಯನ್ನಾಧರಿಸಿ ನೀಡಿರುತ್ತಾರೆ. 1ನೇ ಎದುರುದಾರರು ತಮ್ಮ ವರದಿಯಲ್ಲಿ ದೂರುದಾರರ ಮನೆ 200 ಮೀಟರ್ ಆಚೆ ಇದೆಯೆಂದು ತಿಳಿಸಿರುತ್ತಾರೆ. ಆದರೆ ಜಂಟಿ ತನಿಖಾ ವರದಿಯ ಪ್ರಕಾರ ದೂರುದಾರರ ಮನೆ 160ಮೀ ಅಂತರದಲ್ಲಿದೆಯೆಂದು ತಿಳಿಸಿರುತ್ತಾರೆ. 1ನೇ ಎದುರುದಾರರು ಜವಾಬ್ದಾರಿಯುತವಾದ ಅಧಿಕಾರಿಯಾಗಿ ಸ್ಥಳ ತನಿಖೆ ಮಾಡಿ ಸುಳ್ಳು ವರದಿಯನ್ನು ನೀಡಿದ್ದಲ್ಲದೆ, ಮೆ. ಶ್ರೀನಿವಾಸ ಕ್ರಷರ್ ಘಟಕಕ್ಕೆ ನೀಡಿದ ಪರವಾನಿಗೆಯನ್ನು ರದ್ದುಗೊಳಿಸಲು ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಅಲ್ಲದೇ 2ನೇ ಎದುರುದಾರರು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ(ತಿದ್ದುಪಡಿ) ಅಧಿನಿಯಮದ ನಿಯಮ 6–ಎರ ಅನುಸಾರ 3 ಕಡೆಗೆ 20 ಅಡಿ ಎತ್ತರದ ಗೋಡೆಯನ್ನು ನಿರ್ಮಿಸದೇ, ದೂಳಿನಿಂದ ವಾಯುಮಾಲಿನ್ಯವಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೂ ಯಾವುದೇ ಕ್ರಮಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದ್ದರಿಂದ 1 ಮತ್ತು 2ನೇ ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ ದುರ್ನಡತೆಯೆಸಗಿ, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, 1 ಮತ್ತು 2ನೇ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ

ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ( ವಿಚಾರಣೆಯನ್ನು **ಉಪಲೋಕಾಯುಕ್ತರಿಗೆ** ವಹಿಸಬೇಕೆಂದೂ ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ವರದಿ ನೀಡಲು ಕೋರಲಾಗಿದೆ.

N. Anand 3/7

(ನ್ಯಾಯಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**